ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2013–14 : ಡಿಸೆಂಬರ್ 9, 2014

ಪತ್ರಿಕಾ ಪ್ರಕಟಣೆ

## ದುಂದು ವೆಚ್ಚಕ್ಕೆ ಕಡಿವಾಣ :
## ಸುವರ್ಣ ಸೌಧದಲ್ಲಿ ಪಾವತಿ ಆಧಾರದ ಮೇರೆಗೆ ಉಪಾಹಾರ ವ್ಯವಸ್ಥೆ

ಬೆಳಗಾವಿ, ಡಿಸೆಂಬರ್ 9 (ಕರ್ನಾಟಕ ವಾರ್ತೆ ) :

ಬೆಳಗಾವಿಯ ಐದನೇ ಬಾರಿಗೆ ನಡೆಯುತ್ತಿರುವ ರಾಜ್ಯ ವಿಧಾನ ಮಂಡಲದ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ಸಚಿವರು, ಶಾಸಕರು ಹಾಗೂ ಕರ್ತವ್ಯ ನಿರತ ಅಧಿಕಾರಿ ವರ್ಗದವರಿಗೆ ಸುವರ್ಣ ಸೌಧದಲ್ಲಿರುವ ವಿಧಾನ ಸಭಾ ಹಾಗೂ ವಿಧಾನ ಪರಿಷತ್ ಮೊಗಸಾಲೆಗಳಲ್ಲಿ ಹಣ ಪಾವತಿ ಆಧಾರದ ಮೇರೆಗೆ ಉಪಾಹಾರ ವ್ಯವಸ್ಥೆಯನ್ನು ಜಿಲ್ಲಾ ಆಡಳಿತ ಮಾಡಿದೆ.

ದುಂದು ವೆಚ್ಚಕ್ಕೆ ಕಡಿವಾಣ ಹಾಕುವಂತೆ ರಾಜ್ಯ ವಿಧಾನ ಸಭೆಯ ಸಭಾಧ್ಯಕ್ಷರು ನೀಡಿರುವ ನಿರ್ದೇಶನದಂತೆ ಜಿಲ್ಲಾಡಳಿತ ಈ ಕ್ರಮ ಕೈಗೊಂಡಿದೆ.

ಹತ್ತು–ದಿನಗಳ ಕಾಲ ನಡೆಯಲಿರುವ ಈ ಅಧಿವೇಶನ ಸಂದರ್ಭದಲ್ಲಿ ಸಚಿವರು, ಶಾಸಕರು ಹಾಗೂ ಕರ್ತವ್ಯ ನಿರತ ಅಧಿಕಾರಿ ವರ್ಗದವರಿಗೆ ಎಂದಿನಂತೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಇರುತ್ತದೆ.

ಸುವರ್ಣ ಸೌಧದ ತಳ ಮಹಡಿಯಲ್ಲಿ ಹಾಗೂ ಪೂರ್ವ ದಿಕ್ಕಿನ ಹೊರಭಾಗದಲ್ಲಿ ಹಣ ಪಾವತಿ ಆಧಾರದ ಮೇರೆಗೆ ಊಟ ಮತು ್ತಉಪಾಹಾರದ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

************

ಡಿ ಪಿ ಎಂ